**ಸಾಕ್ಷಿಯನ್ನು ಪ್ರಮಾಣ ವಚನ ಭೋಧಿಸಲಾದ ದಿನಾಂಕಃ 02-05-2026.**

**ಪಾಟೀ ಸವಾಲುಃ 2ನೇ ಪ್ರತಿವಾದಿ ಪರ ಶ್ರೀ. ಪಿ ಆರ್ ಡಿ ವಕೀಲರಿಂದಃ**

1. ನಾನು 4ನೇ ತರಗತಿಯವರೆಗೆ ಓದಿದ್ದೇನೆ. ನಾನೇ ಈ ದಾವೆಯನ್ನು ಸಲ್ಲಿಸಿದ್ದೇನೆ. ನಾನು ದಾವೆಯನ್ನು ಯಾವ ಉದ್ದೇಶಕ್ಕೆ ಹಾಕಿದ್ದೇನೆ ಎಂದರೆ ನನಗೆ ಗೊತ್ತಿಲ್ಲದೆ ಪ್ರತಿವಾದಿ ನಂ.1 ರವರು ಪ್ರತಿವಾದಿ ನಂ.2 ರವರಿಗೆ 2 ಎಕರೆ ಜಮೀನು ಮಾರಾಟ ಮಾಡಿದ್ದಾರೆ. ದಾವಾ ಜಮೀನು ಸರ್ವೆ ನಂ.124. ಪ್ರತಿವಾದಿ ನಂ.2 ರವರಿಗೆ ಸಂಬಂಧಿಸಿದಂತೆ ಯಾವ ಜಮೀನು ಸರ್ವೆ ನಂಬರ ಮೇಲೆ ದಾವೆ ಸಲ್ಲಿಸಿದ್ದೇನೆ ಎಂದರೆ ಸಾಕ್ಷಿಯು 124 ಇದ್ದು ಅದು ಇನ್ನು ಪೂಡಿಯಾಗಿಲ್ಲ ಎನ್ನುತ್ತಾರೆ. ನನ್ನ ಮುಖ್ಯ ವಿಚಾರಣಾ ಪ್ರಮಾಣ ಪತ್ರಕ್ಕೆ ನಾನೇ ಮಾಹಿತಿಯನ್ನು ನೀಡಿದ್ದೇನೆ. ನನ್ನ ಮುಖ್ಯ ವಿಚಾರಣಾ ಪ್ರಮಾಣ ಪತ್ರದ ಪ್ಯಾರಾ ನಂ.3 ರಲ್ಲಿ ದಾವಾ ಜಮೀನು ಸರ್ವೆ ನಂ.124/3 ಮತ್ತು 124/4 ಎಂದು ನಮೂದು ಮಾಡಿಲ್ಲ. ದಾವಾ ಜಮೀನು ಸರ್ವೆ ನಂ.124/3 ಇದು ಯಾರ ಹೆಸರಿನಲ್ಲಿ ಇದೆ ಎಂದರೆ ಸಾಕ್ಷಿಯು ಅದು ಅಖಂಡವಾಗಿರುತ್ತದೆ ಎನ್ನುತ್ತಾರೆ.

2. ಸರ್ವೆ ನಂ.124 ರಲ್ಲಿ ಒಟ್ಟು 4 ಎಕರೆ 21 ಗುಂಟೆ ಜಮೀನು ಇದೆ. ಸರ್ವೆ ನಂ.124 ರಲ್ಲಿ 3 ಎಕರೆ ಜಮೀನನ್ನು ಅಬ್ದುಲ ಗಣಿ ಪಾಟೀಲ ಇವರು ಪ್ರತಿವಾದಿ ನಂ.1 ಜೈಬುನಿಸಾ ಇವರಿಗೆ ನೊಂದಾಯಿತ ಖರೀದಿ ಪತ್ರದ ಮೂಲಕ ಮಾರಾಟ ಮಾಡಿದ್ದರು ಎಂದರೆ ಸರಿ. ಸದರಿ ಮಾರಾಟ ಮಾಡುವ ವಿಷಯ ನನಗೆ ಗೊತ್ತಿರಲಿಲ್ಲ. ನಾವು ಮತ್ತು ಪ್ರತಿವಾದಿ ನಂ.1 ಇವರು ದಾವಾ ಆಸ್ತಿಯ ಜಂಟಿ ಮಾಲೀಕರು ಎಂದು ನಾವು ಬರೆಸಿಲ್ಲ. ದಾವಾ ಆಸ್ತಿ ಸರ್ವೆ ನಂ.124/3 ನೇದ್ದನ್ನು ಪ್ರತಿವಾದಿ ನಂ.1 ರವರು ಪ್ರತಿವಾದಿ ನಂ.2 ರವರಿಗೆ ಮಾರಾಟ ಮಾಡಿದ ವಿಷಯ ನನಗೆ ಗೊತ್ತಿಲ್ಲ. ದಾವಾ ಜಮೀನು ಸರ್ವೆ ನಂ.124/3 ಇದನ್ನು ಪ್ರತಿವಾದಿ ನಂ.1 ರವರು ಪ್ರತಿವಾದಿ ನಂ.2 ರವರಿಗೆ ಮಾರಾಟ ಮಾಡುವ ಸಮಯದಲ್ಲಿ ಪ್ರತಿವಾದಿ ನಂ.1 ರವರ ಹೆಸರಿನಲ್ಲಿ ಇತ್ತು ಎಂದರೆ ಸಾಕ್ಷಿಯು ಅದು ಪೂಡಿಯಾಗಿರಲಿಲ್ಲ ಎನ್ನುತ್ತಾರೆ. ಅಬ್ದುಲಗಣಿ ಪಾಟೀಲ ಇವರು ದಾವಾ ಜಮೀನು ಸರ್ವೆ ನಂ.124/3 ನೇದ್ದನು ಪ್ರತಿವಾದಿ ನಂ.2 ರವರಿಗೆ ಮಾರಾಟ ಮಾಡುವ ಸಮಯದಲ್ಲಿ ನಿವೇನಾದರು ತಕರಾರು ಮಾಡಿದ್ದಿರಾ ಎಂದರೆ ಸಾಕ್ಷಿಯು ಹೌದು ಎನ್ನುತ್ತಾರೆ. ಆ ಬಗ್ಗೆ ನಾವು ನ್ಯಾಯಾಲಯದಲ್ಲಿ ಕೇಸನ್ನು ಮಾಡಿಲ್ಲ.

3. ದಾವಾ ಆಸ್ತಿ ನಂ.124/3 ಇದು ಪ್ರತಿವಾದಿ ನಂ.1 ರವರ ಸ್ವಯಾರ್ಜಿತ ಆಸ್ತಿ ಎಂದರೆ ಸರಿಯಲ್ಲ. ಸಾಕ್ಷಿ ಮುಂದುವರೆದು ಅದು ಜಂಟಿ ಆಸ್ತಿ ಅನ್ನುತ್ತಾರೆ. ಸರ್ವೆ ನಂ.124/2 ನೇದ್ದನ್ನು ಪ್ರತಿವಾದಿ ನಂ.1 ಇವರು ಜಗನ್ನಾಥ ಪ್ರಭಾಕರ ಕುಲಕರ್ಣಿ ಇವರಿಗೆ ನೊಂದಾಯಿತ ಖರೀದಿ ಪತ್ರದ ಮೂಲಕ ಮಾರಾಟ ಮಾಡಿದ್ದಾರೆ ಎಂದರೆ ನನಗೆ ಗೊತ್ತಿಲ್ಲ. ಈ ಪ್ರಕರಣದಲ್ಲಿ ಅವರನ್ನು ಪಕ್ಷಗಾರರನ್ನಾಗಿ ಮಾಡಿಲ್ಲ. ದಾವಾ ಸರ್ವೆ ನಂ.124/3 ನೆದ್ದನ್ನು ಪ್ರತಿವಾದಿ ನಂ.1 ರವರು ಪ್ರತಿವಾದಿ ನಂ.2 ರವರಿಗೆ ನೊಂದಾಯಿತ ಖರೀದಿ ಪತ್ರದ ಮೂಲಕ ಮಾರಾಟ ಮಾಡಿದ್ದಾರೆ ಎಂದರೆ ಸಾಕ್ಷಿಯು ನನಗೆ ಗೊತ್ತಿಲ್ಲ ಎನ್ನುತ್ತಾರೆ. ಅದೇ ರೀತಿ ಜಮೀನು ಸರ್ವೆ ನಂ.124/2ನೇದ್ದನ್ನು ಪ್ರತಿವಾದಿ ನಂ.1 ಇವರು ಜಗನ್ನಾಥ ಪ್ರಭಾಕರ ಕುಲಕರ್ಣಿ ಇವರಿಗೆ ನೊಂದಾಯಿತ ಖರೀದಿ ಪತ್ರದ ಮೂಲಕ ಮಾರಾಟ ಮಾಡಿದ ವಿಷಯ ಗೊತ್ತಿದ್ದರು ಕೂಡಾ ಗೊತ್ತಿಲ್ಲ ಅಂತಾ ಸುಳ್ಳು ಸಾಕ್ಷಿ ನುಡಿಯುತ್ತಿದ್ದೆನೆ ಎಂದರೆ ಸರಿಯಲ್ಲ.

4. ನಾವು ದಾವಾ ಜಮೀನು ಸರ್ವೆ ನಂ.124/3 ರಲ್ಲಿ ಸ್ವಾಧೀನ ಹೊಂದಿದ್ದೆವೆ ಎಂದು ತೋರಿಸಲು ದಾಖಲೆಗಳನ್ನು ನ್ಯಾಯಾಲಯಕ್ಕೆ ಕೊಟ್ಟಿದ್ದೆವೆ. ನಿಪಿ.1 ರ ಬಗ್ಗೆ ನನ್ನ ತಕರಾರು ಇಲ್ಲ. ನಿಪಿ.2 ರ ಬಗ್ಗೆ ನನ್ನ ತಕರಾರು ಇದೆ. ನಿಪಿ.3 ರಲ್ಲಿ ನಮ್ಮ ಹೆಸರು ಇಲ್ಲ.

**ಮುಂದಿನ ಪಾಟೀ ಸವಾಲಗಾಗಿ ವಕೀಲರು ಸಮಯಾವಕಾಶ ಕೇಳಿದ್ದರಿಂದ ಪಾಟೀ ಸವಾಲನ್ನು ಮುಂದುಡಲಾಯಿತು.**

(ಈ ಮೇಲಿನ ಸಾಕ್ಷ್ಯವನ್ನು ತೆರೆದ ನ್ಯಾಯಾಲಯದಲ್ಲಿ ಸಾಕ್ಷಿಯ ಹೇಳಿಕೆಯನ್ನು ಆಧರಿಸಿ ನಾನು ಹೇಳಿದಂತೆ ಬೆರಳಚ್ಚು ಮಾಡಲಾಯಿತು)

**ಓ.ಹೇ.ಕೇ. ಸರಿ ಅದೆ.**

**ಹಿರಿಯ ದಿವಾಣಿ ನ್ಯಾಯಾಧೀಶರು ಮತ್ತು ಜೆ.ಎಮ್.ಎಫ್.ಸಿ**
**ಖಾನಾಪೂರ.**